**ಜಿಲ್ಲಾ ಪೊಲೀಸ್ ಕಛೇರಿ ಮಂಡ್ಯ ಜಿಲ್ಲೆ, ಮಂಡ್ಯ**

**ಪತ್ರಿಕಾ ಪ್ರಕಟಣೆ**

## " ಮಂಡ್ಯ ಸಿಇಎನ್ ಪೊಲೀಸರ ಕಾರ್ಯಾಚರಣೆ Lingayatmatrimony.com ಮೂಲಕ ಪರಿಚಯವಾಗಿ ರೈಲ್ವೇ ಇಲಾಖೆಯಲ್ಲಿ ಕೆಲಸ ಕೊಡಿಸುವುದಾಗಿ ಆನ್ ಲೈನ್ ಮೂಲಕ ಹೆಚ್ಚಿನ ಹಣ ವರ್ಗಾವಣೆ ಮಾಡಿಸಿಕೊಂಡು ಮೋಸ ಮಾಡುತ್ತಿದ್ದ ಆರೋಪಿಯ ಬಂಧನ "

**ಸಂಕ್ಷಿಪ್ತ ವಿವರ**

ಈ ಕೇಸಿನ ಪಿರ್ಯಾದಿರವರು ದಿನಾಂಕ:-29-03-2023 ರಂದು ಸಿಇಎನ್ ಅಪರಾಧ ಪೊಲೀಸ್ ಠಾಣೆಗೆ ಹಾಜರಾಗಿ ನೀಡಿದ ದೂರಿನ ಸಾರಾಂಶವೇನೆಂದರೆ ತಾನು **Lingayatmatrimony.com** ನಲ್ಲಿ ತನ್ನ ವೈಯುಕ್ತಿಕ ವಿವರಗಳನ್ನು ದಾಖಲು ಮಾಡಿದ್ದು, ನಂತರ ವ್ಯಕ್ತಿಯೊಬ್ಬ ಪರಿಚಯವಾಗಿ ತನಗೆ ರೈಲ್ವೇ ಇಲಾಖೆಯಲ್ಲಿ ಕ್ಲರ್ಕ್ ಕೆಲಸ ಕೊಡಿಸುವುದಾಗಿ ನಂಬಿಸಿ ಕೆಲಸದ ಸಂಬಂಧ ಡಿ.ಡಿ ತೆಗೆದುಕೊಳ್ಳಲು, ಸ್ಯಾಲರಿ ಖಾತೆ ಮಾಡಿಸಲು, ಸೆಕ್ಯೂರಿಟಿ ಹಣ ಪಾವತಿಸಲು ಇತ್ಯಾದಿ ಕಾರಣಗಳನ್ನು ನೀಡಿ ಹಂತ ಹಂತವಾಗಿ ಫೋನ್ ಪೇ, ಗೂಗಲ್ ಪೇ ಹಾಗೂ ಇತರೆ ಆನ್ ಲೈನ್ ಪೇಮೆಂಟ್ ಮುಖಾಂತರ 31,34,300/-(ಮೂವತ್ತೊಂದು ಲಕ್ಷದ ಮೊವತ್ತು ನಾಲ್ಕು ಸಾವಿರದ ಮುನ್ನೂರು ರೂ) ಗಳನ್ನು ಪಾವತಿಸಿಕೊಂಡು ಕೆಲಸವನ್ನು ಕೊಡಿಸದೇ, ಹಣವನ್ನು ವಾಪಸ್ ನೀಡದೆ ಮೋಸ ಮಾಡಿರುವುದಾಗಿ ನೀಡಿರುವ ದೂರಿನ ಮೇರೆಗೆ ಸಿಇಎನ್ ಠಾಣೆಯಲ್ಲಿ ಪ್ರಕರಣ ದಾಖಲು ಮಾಡಿಕೊಂಡು ತನಿಖೆ ಕೈಗೊಳ್ಳಲಾಗಿತ್ತು.

ಸದರಿ ಪ್ರಕರಣದ ಆರೋಪಿಯ ಪತ್ತೆ ಬಗ್ಗೆ ಸಿಇಎನ್ ಅಪರಾಧ ಪೊಲೀಸ್ ಠಾಣಾ ಪಿ.ಐ ಮತ್ತು ಸಿಬ್ಬಂದಿಯವರ ತಂಡ ರಚನೆ ಮಾಡಲಾಗಿತ್ತು. ಸದರಿ ಆರೋಪಿ ಪತ್ತೆ ತಂಡವು ಪ್ರಕರಣದ ಆರೋಪಿಯನ್ನು ಪತ್ತೆ ಮಾಡಿ ದಸ್ತಗಿರಿ ಮಾಡಿ ಕೂಲಂಕುಷವಾಗಿ ವಿಚಾರಣೆಗೊಳಪಡಿಸಿ ಆತನಿಂದ ಮೋಸ ಮಾಡಿದ್ದ ಹಣದಲ್ಲಿ .

1. ಶೇಖರಿಸಿಟ್ಟಿದ್ದ **10,000,00/-**ರೂ ನಗದು ಹಣ
2. ಪಡೆದ ಹಣದಿಂದ ಖರೀದಿಸಿದ್ದ ಮೂರು ಚಿನ್ನದ ಉಂಗುರಗಳು ಮತ್ತು ಒಂದು ಚೈನು ಇವುಗಳ ಒಟ್ಟು ತೂಕ 37 ಗ್ರಾಂ ಅಂದಾಜು ಮೌಲ್ಯ ಸುಮಾರು **2,34,000/-** ರೂಗಳು
3. ಪಡೆದ ಹಣದಿಂದ ಖರೀದಿಸಿದ್ದ ಒಂದು **Apple I Phone** ಅಂದಾಜು ಮೌಲ್ಯ ಸುಮಾರು **1,30,000/-** ರೂಗಳು
4. ಪಡೆದ ಹಣದಿಂದ ಖರೀದಿಸಿದ್ದ ಒಂದು ಪಲ್ಸರ್ ಮೋಟಾರ್ ಸೈಕಲ್

   **ಇವುಗಳ ಒಟ್ಟು ಮೌಲ್ಯ 16 ಲಕ್ಷ ರೂ.**

ಸಿಇಎನ್ ಅಪರಾಧ ಪೊಲೀಸ್ ಠಾಣಾ ಅಧಿಕಾರಿಗಳು ಮತ್ತು ಸಿಬ್ಬಂದಿಯವರ ಈ ಕಾರ್ಯವನ್ನು ಮಾನ್ಯ ಮಂಡ್ಯ ಜಿಲ್ಲಾ ಪೊಲೀಸ್ ಅಧೀಕ್ಷಕರು ಶ್ಲಾಘಿಸಿ ಪ್ರಶಂಸಿರುತ್ತಾರೆ.

ಸಹಿ/-
ಪೊಲೀಸ್ ಅಧೀಕ್ಷಕರು
ಮಂಡ್ಯ ಜಿಲ್ಲೆ.

